# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | 159 (1143) |
| ಸದಸ್ಯರ ಹೆಸರು | ಶ್ರೀ ಸುನೀಲ್ ಸುಬ್ರಮಣಿ ಎಂ.ಪಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | 17.03.2020 |
| ಉತ್ತರಿಸುವವರು | ಪೌರಾಡಳಿತ, ತೋಟಗಾರಿಕೆ ಹಾಗೂ ರೇಷ್ಮೆ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಕೊಡಗು ಜಿಲ್ಲೆ ಮಡಿಕೇರಿ ನಗರದ ರಾಜಾಸೀಟ್‌ನಲ್ಲಿರುವ ಮಕ್ಕಳ ರೈಲು ಸ್ಥಗಿತಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಇದು ಎಷ್ಟು ದಿನಗಳಿಂದ ಸ್ಥಗಿತಗೊಂಡಿದೆ; ಇದಕ್ಕೆ ಕಾರಣಗಳೇನು? | ರೈಲ್ವೆ ಇಲಾಖೆ, ಮೈಸೂರು ರವರ ಪತ್ರದ ಸಂಖ್ಯೆ: ವೈ.ಎಂ.271/ವಿ/ಬಿ.ಜಿ,ದಿನಾಂಕ: 09.08.2018ರಲ್ಲಿ ಪುಟಾಣಿ ರೈಲಿನ ನಿಯತಾಕಾಲಿಕ ತಪಾಸಣೆ ವರದಿಯಲ್ಲಿ ಹಾಲಿ ಇರುವ ಪುಟಾಣಿ ರೈಲಿನಲ್ಲಿ ಗೇರ್ ಬಾಕ್ಸ್, ಹೈಡ್ರಾಲಿಕ್ ಪವರ್ ಟ್ರಾನ್ಸ್‌ಮಿಷನ್, ಲೀಫ್ ಸ್ಪ್ರಿಂಗ್‌ಗಳು, ಸೆಂಟರ್ ಪಿವೋಟ್‌ಗಳು ಮತ್ತು ರೈಲ್ವೆ ಬಾಡಿ 28 ವರ್ಷ ಹಳೆಯದಾಗಿರುವುದರಿಂದ ಶಿಥಿಲಗೊಂಡು, ತಾಂತ್ರಿಕ ದೋಷದಿಂದ ಕೂಡಿದ್ದು, ಪ್ರಯಾಣಿಕರ ಹಿತದೃಷ್ಟಿಯಿಂದ ಸ್ಥಗಿತಗೊಳಿಸುವಂತೆ ತಿಳಿಸಿರುತ್ತಾರೆ. ಹಳೆಯ ರೈಲಿನ ದುರಸ್ತಿಯ ಬದಲು ಪ್ರವಾಸಿಗರ ಸುರಕ್ಷತಾ ಹಿತದೃಷ್ಟಿಯಿಂದ ಹೊಸದಾಗಿ ರೈಲನ್ನು ಖರೀದಿಸಿ ಚಾಲನೆ ಮಾಡಲು ವರದಿಯಲ್ಲಿ ಸೂಚಿಸಿರುವುದರಿಂದ ಮಕ್ಕಳ ರೈಲನ್ನು ಸುಮಾರು 515 ದಿನಗಳಿಂದ (ಸುಮಾರು ಒಂದು ವರ್ಷ, 5 ತಿಂಗಳು) ಕೊಡಗು ಜಿಲ್ಲೆ ಮಡಿಕೇರಿ ನಗರದ ರಾಜಾಸೀಟ್‌ನಲ್ಲಿರುವ ಮಕ್ಕಳ ರೈಲು ಸ್ಥಗಿತಗೊಳಿಸಿದೆ. |
| ಆ) | ಈ ಪುಟಾಣಿ ರೈಲನ್ನು ಮತ್ತೆ ಓಡಿಸಲು ನಗರಸಭೆ ಕೈಗೊಂಡ ಕ್ರಮಗಳೇನು; ಫೆಬ್ರವರಿ-2020ರ ಅಂತ್ಯಕ್ಕೆ ಆಗಿರುವ ಪ್ರಗತಿಯ ವಿವರಗಳನ್ನು ನೀಡುವುದು. | ಸದರಿ ಪುಟಾಣಿ ರೈಲನ್ನು ಹೊಸದಾಗಿ ಖರೀದಿಸುವುದರ ಜೊತೆಗೆ Track Reassembling, Installation of Playing Equipments, Providing Walkway, MS Grill Fencing and Construction of New Platform and Commercial Shops ಒಳಗೊಂಡಂತೆ ಮೂಲಭೂತ ಸೌಕರ್ಯಗಳನ್ನು ಒದಗಿಸಿ, ಪುಟಾಣಿ ರೈಲು ಚಲಿಸುವ ಹಾದಿಯ ಬದಿಗಳಲ್ಲಿ ಅಲಂಕೃತಗೊಳಿಸಲು ವಿಸ್ತೃತ ಯೋಜನಾ ವರದಿಯನ್ನು (ಡಿ.ಪಿ.ಆರ್.) ತಯಾರಿಸಿ, ರೈಲ್ವೆ ಇಲಾಖೆ ಮೈಸೂರು ವಿಭಾಗ, ಡಿ.ಆರ್.ಎಂ. ಕಛೇರಿಗೆ ತಾಂತ್ರಿಕ ಪರಿಶೀಲನೆಗಾಗಿ ಜಿಲ್ಲಾಧಿಕಾರಿಗಳು, ಕೊಡಗು ಜಿಲ್ಲೆ, ಮಡಿಕೇರಿ ರವರ ಕಛೇರಿಯಿಂದ ದಿನಾಂಕ:28-10-2019ರಲ್ಲಿ ಸಲ್ಲಿಸಲಾಗಿರುತ್ತದೆ. ರೈಲ್ವೆ ಇಲಾಖೆಯಿಂದ ಅನುಮೋನೆಯಾದ ನಂತರ ಅನುದಾನ ಲಭ್ಯತೆ ಆಧಾರದ ಮೇಲೆ ಪರಿಶೀಲಿಸಿ ಅಗತ್ಯ ಕ್ರಮ ಕೈಗೊಳ್ಳಲಾಗುವುದು. |
| ಇ) | ಹೊಸ ರೈಲನ್ನು ಸ್ಥಾಪಿಸಲಾಗುವುದೇ; ಹಾಗಿದ್ದಲ್ಲಿ, ಇದಕ್ಕೆ ಸಂಬಂಧಿಸಿದ ವಿವರಗಳನ್ನು ನೀಡುವುದು; ಈ ರೈಲನ್ನು ಯಾವ ಕಾಲಮಿತಿಯೊಳಗೆ ಪುನರಾರಂಭಿಸಲಾಗುವುದು? (ವಿವರ ನೀಡುವುದು) | ಹೊಸ ರೈಲನ್ನು ಸ್ಥಾಪಿಸಲು ರೈಲ್ವೆ ಇಲಾಖೆಯಿಂದ ವಿಸ್ತೃತ ಯೋಜನಾ ವರದಿಗೆ (ಡಿ.ಪಿ.ಆರ್) ತಾಂತ್ರಿಕ ಅನುಮೋದನೆ ದೊರೆತ ನಂತರ ಅನುದಾನದ ಲಭ್ಯತೆಯಾನುಸಾರ ಪರಿಶೀಲಿಸಿ ಕ್ರಮ ಕೈಗೊಳ್ಳಲಾಗುವುದು. |

**ಸಂಖ್ಯೆ: ನಅಇ 45 ಜಿಇಎಲ್ 2020**

(ನಾರಾಯಣ ಗೌಡ)
ಪೌರಾಡಳಿತ, ತೋಟಗಾರಿಕೆ ಹಾಗೂ ರೇಷ್ಮೆ ಸಚಿವರು